# ಹೂವಿನ ಕರಗ

ಹುಣ್ಣಿಮೆಯ ಬೆಳಕಲ್ಲಿ ನಡೆಯುವ ಕರಗದ ಉತ್ಸವ ಬೆಂಗಳೂರಿನ ಸುಪ್ರಸಿದ್ಧ ಆಚರಣೆ. ಚೈತ್ರ ಶುದ್ಧ ಹುಣ್ಣಿಮೆಯಂದು ಕರಗದ ಆಚರಣೆಯು ಬೆಂಗಳೂರಿನಲ್ಲಿರುವ ಧರ್ಮರಾಯನ ದೇವಸ್ಥಾನದ ಪೌಳಿಯಲ್ಲಿ ಪ್ರತಿ ವರುಷವೂ ನಡೆಯುತ್ತದೆ. ಇದು ಪಾಂಡವರ ಪತ್ನಿ ದ್ರೌಪದಿಯ ಹೆಸರಿನಲ್ಲಿ ಜರುಗುತ್ತದೆ. ಹೀಗಾಗಿ ಇದನ್ನು 'ದ್ರೌಪದಮ್ಮನ ಕರಗ' ಎಂತಲೂ ಕರೆಯುವ ವಾಡಿಕೆ ಇದೆ. ವಿಶೇಷವಾಗಿ ಇದನ್ನು ಆಚರಿಸುವವರು 'ವಹ್ನಿಕುಲ ಕ್ಷತ್ರಿಯರು' ಅಥವಾ 'ತಿಗಳರು'. ಬರೀ ಮಲ್ಲಿಗೆಯ ಹೂವಿನಿಂದಲೇ ಅಲಂಕಾರಗೊಂಡ ಕರಗದ ಆಚರಣೆಯ ನಂತರ ಕೊನೆಯದಿನ ಮುಕ್ತಾಯವಾಗುವುದು ಓಕುಳಿ ಎರಚಾಟದೊಂದಿಗೆ, ಹೀಗಾಗಿ ಇದು ವಸಂತಮಾಸದ ಉತ್ಸವವೂ ಹೌದು.

ಈ ಕರಗದ ಆಚರಣೆಯು ಬೆಂಗಳೂರಿನಲ್ಲಿ ಮಾತ್ರವಲ್ಲದೆ ಕೋಲಾರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್, ಮಾಲೂರು, ಹೊಸಕೋಟೆ ಮುಂತಾದ ಕಡೆಗಳಲ್ಲಿಯೂ ಆಚರಿಸುವ ಸಂಪ್ರದಾಯವಿದೆ. ಆನೇಕಲ್ಲಿನ ಸುತ್ತಮುತ್ತಲಿನ ಮೂವತ್ತಕ್ಕೂ ಹೆಚ್ಚಿನ ಗ್ರಾಮಗಳಲ್ಲಿ 'ಮೊರಸು ಒಕ್ಕಲಿಗ'ರು 'ಕರಗದಮ್ಮ'ನನ್ನು ಮನೆದೇವರೆಂದು ಪೂಜಿಸುವ ಸಂಪ್ರದಾಯವಿದೆ. ಆ ಭಾಗದಲ್ಲಿ 'ಕರಗದಮ್ಮ'ನಿಗೆ ಮನೆದೇವತೆಯ ರೂಪದಲ್ಲಿ ಪ್ರತಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ಜಾತ್ರೆ ನಡೆಸುತ್ತಾರೆ. ಈ ಜಾತ್ರೆಯಲ್ಲಿ 'ಬಲಿ' ಸಂಪ್ರದಾಯವೂ ಇದೆ. ವಾಸ್ತವವಾಗಿ 'ಕರಗದಮ್ಮ' ಎನ್ನುವುದು ಜಲದೇವತೆ. ಕುಂಭದಲ್ಲಿ ನೀರನ್ನು ತುಂಬಿ ಪೂಜಿಸುವ ವಿಧಾನವೇ ಈ ಕರಗದ ಮೂಲ ಆಚರಣೆ. ದ್ರಾವಿಡ ಸಂಸ್ಕೃತಿಯಲ್ಲಿ 'ಚಂದ್ರ' ಮತ್ತು 'ಜಲ'ವನ್ನು ದೇವತೆಯರೆಂದೇ ಆರಾಧಿಸುವ ಸಂಪ್ರದಾಯವಿದೆ. 'ಮಡಕೆ ಮಾತೃದೇವತೆಯ ಚಿಹ್ನೆ' ಎಂದು ಡಿ.ಡಿ. ಕೊಸಾಂಬಿ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ 'ಶ್ರೀಶಕ್ತಿಯ ಪೂಜೆಯ ಮುಖ್ಯ ದಿನವು ಹುಣ್ಣಿಮೆಯಾಗಿರುತ್ತದೆ' ಎಂದು ಶಂಬಾ ಅವರೂ ಅಭಿಪ್ರಾಯಪಡುತ್ತಾರೆ. ಹೀಗಾಗಿ ಕರಗದ ಆಚರಣೆಯು ಚಾಂದ್ರ ಸಂಪ್ರದಾಯ.

'ಕರಗ' ಆಚರಣೆಯ ವಿಧಿವಿಧಾನಗಳನ್ನು ನೋಡಿದರೆ ಅದರ ಆಚರಣೆಯು ಮಾತೃದೇವತೆಯ ಆರಾಧನೆಯಾಗಿದೆ. 'ಈ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ರೂಪುಗೊಂಡು ಮಾತೃದೇವತೆಗಳ ಪ್ರತಿನಿಧಿಗಳಾದ ಗ್ರಾಮದೇವತೆಗಳು ಗ್ರಾಮಗಳಲ್ಲಿ ಆರಾಧನೆಗೆ ಒಳಗಾದವು. ಸಮೃದ್ಧಿಯ ಆಚರಣೆಗಳೆಲ್ಲಾ ಸ್ತ್ರೀ ಸಂಬಂಧಿ ಆಚರಣೆಗಳು. ಪ್ರಾಚೀನ ಕಾಲದಲ್ಲಿ ಕರಗದ ವಿಧಿವಿಧಾನಗಳನ್ನು ಸಂಪೂರ್ಣವಾಗಿ ಮಹಿಳೆಯರೇ ಮಾಡುತ್ತಿದ್ದರು. ಸಾಮಾನ್ಯವಾಗಿ ಕೃಷಿ ಮುಂದುವರೆದ ಘಟ್ಟದಲ್ಲಿ ಗಂಡು ಸಮುದಾಯದಲ್ಲಿ ಮಹತ್ವದ ಸ್ಥಾನವನ್ನು ಗಳಿಸಿದ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಹಾಗೂ ಪಿತೃ ಪ್ರಧಾನ ವ್ಯವಸ್ಥೆ ಸಮಾಜದಲ್ಲಿ ಆರಂಭವಾದಾಗಿನಿಂದ ಅದರ ಆಚರಣೆಯ ಹಕ್ಕನ್ನು ಪುರುಷರು ಪಡೆದಿರಬೇಕು! ಹೆಣ್ಣಿನ ಮೇಲ್ವಿಚಾರಣೆಯಲ್ಲಿ ಆಗುತ್ತಿದ್ದ ಆಚರಣೆಯ ತೊಡಕನ್ನು ನಿವಾರಿಸಿಕೊಳ್ಳಲು ಗಂಡು ಪೂಜಾರಿಯು ಸ್ತ್ರೀ ವೇಷಧಾರಿಯಾಗುತ್ತಾನೆ. ಅದರ ಸಂಕೇತವಾಗಿ ಈಗಲೂ ಕರಗವನ್ನು ಹೊರುವವರು ಸ್ತ್ರೀ ರೂಪದಲ್ಲಿರುವ ಪುರುಷ. ಆತ ವಿವಾಹಿತನಾಗಿದ್ದರೆ ಉತ್ಸವದ ಅವಧಿಯಲ್ಲಿ ತನ್ನ ಪತ್ನಿಯೊಡನೆ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳಬಾರದೆಂಬ ನಿಯಮವೂ ಇದೆ' (ಡಾ. ಸಿದ್ದಲಿಂಗಯ್ಯ).

ತಮಿಳುನಾಡಿನಲ್ಲಿ ಕರಗದ ಆಚರಣೆಗೆ ಪ್ರಾಚೀನ ಪರಂಪರೆಯಿದೆ. ಅಲ್ಲಿನ ಜಲದೇವತೆಯಾದ 'ಮಾರಿಯಮ್ಮ'ನನ್ನು ಪೂಜಿಸುವ ಧಾರ್ಮಿಕ ಸಂದರ್ಭದಲ್ಲಿ ಕರಗದ ಆಚರಣೆಯು ಆರಂಭಗೊಂಡಿತು ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಜಾನಪದ ವಿದ್ವಾಂಸರು ಹೇಳುವಂತೆ 'ಕರಗ' ಶಬ್ದವು ಶುದ್ಧೀಕರಣಕ್ಕಾಗಿ ತುಂಬಿದ ಪವಿತ್ರ ಜಲದಿಂದ ಕೂಡಿದ ಮಡಕೆ ಅಥವಾ ಕುಂಭವನ್ನು ನಿರ್ದೇಶಿಸುತ್ತದೆ (ತಮಿಳುನಾಡು ಜಾನಪದ). ಹತ್ತನೇ ಶತಮಾನದ ಉತ್ತರಾರ್ಧದಲ್ಲಿದ್ದ ಕನ್ನಡದ ಮುಖ್ಯ ಕವಿ ರನ್ನನ 'ಗದಾಯುದ್ಧ' ಕಾವ್ಯದಲ್ಲಿ '.... ದೇವಾಸುರ ಯುದ್ಧಕ್ಕೆ ಕರಗಂಬೊತ್ತಳೆಂಬಂತೆ...' ದೇವತೆಗಳಿಗೂ ಮತ್ತು ಅಸುರರಿಗೂ ಯುದ್ಧ ನಡೆಯಲೆಂಬ ಉದ್ದೇಶದಿಂದ ಕರಗವನ್ನು ತಲೆಯ ಮೇಲೆ ಹೊತ್ತವಳಂತೆ ದ್ರೌಪದಿ ತೋರುತಿದ್ದಳೆಂದು ವರ್ಣಿತವಾಗಿದೆ. ಕನ್ನಡದ ಜನಪದ ತ್ರಿಪದಿಯೊಂದು ಕರಗವನ್ನು ಕುರಿತು ಹೀಗೆ ಹೇಳುತ್ತದೆ: ಕರಗ ಬತ್ತದಂತ ಕಾದಿದ್ದ ಬೀದಿಲಿ / ಕರಗ ಬಂದು ಗುಡಿಗ್ಹೋದೋ| ಕಾಳಮ್ಮ / ಕಾದಿದ್ದು ಆರತಿ ಬೆಳಗೀಲೋ. ಹೀಗೆ ಕರಗ ಕರ್ನಾಟಕದಲ್ಲಿ ಪ್ರಾಚೀನ ಕಾಲದ ಒಂದು ಧಾರ್ಮಿಕ ಆಚರಣೆಯಾಗಿತ್ತು ಎನ್ನುವುದನ್ನು ಈ ಉಲ್ಲೇಖಗಳು ಹೇಳುತ್ತವೆ!

ಕರ್ನಾಟಕದಲ್ಲಿ ನಡೆಯುವ 'ಹೂವಿನ ಕರಗ'ವು ಮಾಘ ಮಾಸದ ಹುಣ್ಣಿಮೆಯಂದು ನಡೆಯುವ 'ಫಲಸಮೃದ್ಧಿ'ಯ ಆಚರಣೆಯಾಗಿದೆ. ಹೂವಿನ ಕರಗವನ್ನು ವಿಶೇಷವಾಗಿ ಬೆಂಗಳೂರಿನಲ್ಲೇ ವಾಸವಿರುವ ವಹ್ನಿಕುಲ ಕ್ಷತ್ರಿಯರು (ತಮಿಳು ಭಾಷಿಕ ತಿಗಳರು) ಆಚರಿಸುತ್ತಾರೆ. ಆಶ್ಚರ್ಯದ ಸಂಗತಿ ಎಂದರೆ ಹೆಸರಘಟ್ಟ, ನೆಲಮಂಗಲ, ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿರುವ ಕನ್ನಡ ಭಾಷಿಕ ತಿಗಳರ ಸುಪ್ತಮನಸ್ಸಿನಲ್ಲಿ ಕರಗದ ಆಚರಣೆಯ ಸ್ಮರಣೆಯೇ ಇಲ್ಲ! ಹೂವಿನ ಕರಗದ ಆಚರಣೆ ಆರಂಭವಾಗುವುದು ಬೆಂಗಳೂರಿನ ಧರ್ಮರಾಯನ ಗುಡಿಯಿಂದ. ಧ್ವಜಾರೋಹಣ, ಹಸಿ ಮಣ್ಣಿನ ಕುಂಭದಲ್ಲಿ ನೀರು ತರುವುದು, ಗಾವು ಸಿಗಿಯುವುದು, ಕೊಂಡ ಹಾಯುವುದು ಈ ಆಚರಣೆಯ ಅವಿಭಾಜ್ಯ ಅಂಗಗಳು. ದ್ರಾವಿಡ ಸಂಸ್ಕೃತಿಯ ಅನೇಕ ಬುಡಕಟ್ಟುಗಳಲ್ಲಿರುವಂತೆ ತಿಗಳ ಸಮುದಾಯದ ಧಾರ್ಮಿಕ ಮತ್ತು ವಿವಾಹ, ನಾಮಕರಣ, ಹೆಣ್ಣುಮಕ್ಕಳಿಗೆ ಹಸೆಹಚ್ಚುವ ಮಂಗಳ ಕಾರ್ಯಗಳಲ್ಲಿ ಪುರೋಹಿತರು ಇರುವುದಿಲ್ಲ! ಎಲ್ಲ ಆಚರಣೆಗಳೂ ಸಮುದಾಯದ 'ಯಜಮಾನ'ರ ಮುಂದಾಳತ್ವದಲ್ಲಿ ನಡೆಯುತ್ತವೆ. ಹೇಗೆ ನೋಡಿದರೂ ಇದೊಂದು ಅಪ್ಪಟ ದ್ರಾವಿಡ ಸಂಸ್ಕೃತಿಯ ಆಚರಣೆ.

ಕರಗ ಒಂದು ಸಮುದಾಯದ ಆಚರಣೆಯಾದರೂ, ಅದು ಒಂದು ನಿರ್ದಿಷ್ಟ ಸಮುದಾಯಕ್ಕಷ್ಟೇ ಸೀಮಿತವಾಗಿಲ್ಲ! ವಿಶಾಲಾರ್ಥದಲ್ಲಿ ಸಾಮಾಜಿಕ ಸಾಮರಸ್ಯ, ಅನ್ಯ ಧರ್ಮೀಯರೊಂದಿಗಿನ ಸಹಬಾಳ್ವೆ ಹಾಗೂ ಬಹುರೂಪದ ಸಂಸ್ಕೃತಿಗಳನ್ನು ಗೌರವಿಸುವ ಆಶಯವನ್ನೂ ಒಳಗೊಂಡಿದೆ. ಈ ಬಗೆಯ ಸಾಮಾಜಿಕ ಒಳಗೊಳ್ಳುವಿಕೆ ಕರ್ನಾಟಕದಲ್ಲಿ ವಿಶೇಷವಾಗಿ ತಳಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮಂಟೇಸ್ವಾಮಿ, ಸಿದ್ದಪ್ಪಾಜಿ, ಮೈಲಾರಲಿಂಗ, ನಾಯಕನಹಟ್ಟಿ ತಿಪ್ಪಯ್ಯನ ಜಾತ್ರೆಗಳಲ್ಲಿ ಎದ್ದುಕಾಣುತ್ತದೆ. ಆದ್ದರಿಂದಲೇ ಬೆಂಗಳೂರಿನ ಹೂವಿನ ಕರಗ ಮೊದಲು ಗುಡಿಗೆ ಸಮೀಪದ ಮಸ್ತಾನ್ ಸಾಬ್ ದರ್ಗಾಕ್ಕೆ ಪೂಜೆ ಸಲ್ಲಿಸಿದ ನಂತರವೇ ನಗರದಲ್ಲಿ ಮೆರವಣಿಗೆ ಹೊರಡುವುದು. ಸಮಾಜದ ಎಲ್ಲ ಸಮುದಾಯದವರೂ ಹಲವಾರು ವಿಧಗಳಲ್ಲಿ ಪಾಲ್ಗೊಳ್ಳುವ ಕರಗದ ಆಚರಣೆ ಬಹುಸಂಸ್ಕೃತಿಗಳ ಏಕತೆಯ ರೂಪಕವೂ ಹೌದು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಾವು ಮಾಡುವ ಕಾರ್ಯವು ಕಾರಣಗಳ ಅನುರೂಪವಾಗಿರುತ್ತದೆ.

  —ಅನುಪಮಾ ನಿರಂಜನ

- ಸರ್ಕಾರ ಎಂದರೆ ಅಲ್ಲಿರುವ ಸರ್ವತಂತ್ರ ಸ್ವತಂತ್ರ ಅಧಿಕಾರಿಗಳಷ್ಟೇ.

  —ಕೆ. ಶಿವರಾಮ ಕಾರಂತ

- ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.

  —ಎ.ಆರ್. ಕೃಷ್ಣಶಾಸ್ತ್ರಿ

- ನಡೆದಷ್ಟು ದಾರಿ ಇದೆ, ಪಡೆದಷ್ಟು ಭಾಗ್ಯವಿದೆ ಎಂಬುದೇ ಜಗತ್ತು ನಮಗೆ ನೀಡುವ ಸಂದೇಶವಾಗಿದೆ.

  —ವಿ.ಕೃ. ಗೋಕಾಕ್

- ಸಂಸ್ಕೃತಿಯ ಮಹೋನ್ನತವಾದ ಮಹಲಿಗೆ ನೀತಿ ನೆಲೆಗಟ್ಟು, ಅನುಭವ ಆವಾರ.

  —ಕೆ.ಎಸ್. ನಿಸಾರ್ ಅಹಮದ್